**ದಿನಾಂಕಃ 06–03–2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಕೆ ಜೆ ಡಿ ವಕೀಲರಿಂದಃ**

ಸಾಕ್ಷಿಗೆ ನಿಡಿ 81 ದಿಃ 13–4–2022 ರ ನೋಂದಾಯಿತ ಕ್ರಯಪತ್ರದ ದಾಖಲೆಯನ್ನು ತೋರಿಸಿ, ಅದರಲ್ಲಿರುವ ಕೃಷ್ಣ ಶೆಟ್ಟಿ, ಯಶೋಧಮ್ಮ , ವಿನಯ, ದಿವ್ಯಶ್ರೀ ಇವರುಗಳ ಸಹಿಗಳನ್ನು ತೋರಿಸಿ, ಕೇಳಲಾಗಿ ಸದರಿ ಸಹಿಗಳನ್ನು ಒಪ್ಪಿರುತ್ತಾರೆ. (ದಾಖಲೆಯು ಡಿಜಿಟಲ್ ದೃಢೀಕರಣ ಪತ್ರ ಆಗಿರುವ ಕಾರಣ ಸಹಿಗಳನ್ನು ನಿಶಾನೆಗೊಳಿಸಿರುವುದಿಲ್ಲ). ಯಶೋಧಮ್ಮ, ವಿನಯ, ದಿವ್ಯಶ್ರೀ ಇವರೆಲ್ಲಾ ನನ್ನ ಪತ್ನಿ ಹಾಗೂ ಮಕ್ಕಳು ಎಂದರೆ ಸರಿ. ನಾವೆಲ್ಲರೂ ಒಟ್ಟಾಗಿ ಸಹಿ ಮಾಡಿದ್ದೇವೆಂದರೆ ಸರಿ. ಸದರಿ ನಿಡಿ –81 ರಲ್ಲಿ ಕಂಡುಬರುವ ಗಣೀಕೃತ ಭಾವಚಿತ್ರಗಳು, ನನ್ನದು , ನನ್ನ ಪತ್ನಿ ಮತ್ತು ನನ್ನ ಮಕ್ಕಳದ್ದು ಎಂದರೆ ಸರಿ, ಸದರಿ ಭಾವಚಿತ್ರಗಳನ್ನು ಈಗಾಗಲೇ ನಿಡಿ 81 ಎ, ಬಿ, ಸಿ ಎಂದು ಗುರುತಿಸಲಾಗಿದೆ.

ಆರ್ ಎ 61/91–92, ಆರ್ ಎ 14/86–87 ಈ ಮೇಲ್ಮನವಿಗಳ ದಾಖಲೆಗಳನ್ನು ಏನಾದರೂ ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಸದರಿ ಮೇಲ್ಮನವಿಗಳನ್ನು ನನ್ನ ಪತ್ನಿ ಯಶೋಧಮ್ಮ ರವರು ಸಲ್ಲಿಸಿರುತ್ತಾರೆ. ಆ ಅಪೀಲುಗಳು ವಜಾ ಆಗಿರುತ್ತವೆಂದರೆ ನನಗೆ ಗೊತ್ತಿಲ್ಲ. ಈ 2 ಮೇಲ್ಮನವಿಗಳ ಬಗ್ಗೆ ಉಚ್ಚನ್ಯಾಯಾಲಯದಲ್ಲಿ ಅಪೀಲನ್ನು ಸಲ್ಲಿಸಿದ್ದೀರಾ ಎಂದರೆ ನಮ್ಮ ಲಾಯರ್ ನ್ನು ಕೇಳಬೇಕು.

ಅ ದಾ ನಂ 126/1990 ಜವರೇಗೌಡ ರವರು ಯಶೋಧಮ್ಮ ರವರ ಮೇಲೆ ಸಲಿಸಿದ್ದ ದಾವೆಯ ತೀರ್ಪು ಮತ್ತು ಡಿಕ್ರಿಯ ಮೇಲೆ ಮೇಲ್ಮನವಿ ಹಾಕಿದ್ದೀರಾ ಎಂದರೆ ಸಾಕ್ಷಿಯು ಹಾಕಿರುತ್ತೇವೆಂದು ನುಡಿಯುತ್ತಾರೆ. ಸದರಿ ಮೇಲ್ಮನವಿಯ ಸಂಖ್ಯೆ ಗೊತ್ತಿಲ್ಲ. ಸದರಿ ಮೇಲ್ಮನವಿ ದಾಖಲೆಗಳನ್ನು ಕೊಡಲು ತೊಂದರೆ ಇದೆಯಾ ಎಂದರೆ ನಮ್ಮ ಲಾಯರ್ ಗೆ ಕೊಟ್ಟಿದ್ದೇನೆ. ಸದರಿ ಅಪೀಲು ನಮ್ಮಂತೆ ಆಗಿ ಮುಗಿದು ಹೋಗಿರುತ್ತದೆ. ಆ ಕಾಪಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇವೆ.

ನಾನು ಅ.ದಾವಾ 126/90 ರ ಮೇಲೆ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲವೆಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರಿದ ಆರ್ ಎ 485/10 ರಲ್ಲಿ ನೆಗೆಟೀವ್ ಮಾಡಿರುತ್ತಾರೆಂದು ನುಡಿಯುತ್ತಾರೆ. ಅ.ದಾ 126/90 ರಲ್ಲಿ ತೀರ್ಪು ಮತ್ತು ಡಿಕ್ರಿ ಆಗಿ ಅದರ ಮೇಲ್ಮನವಿ ಕಾಲಾವಧಿಯು ಮುಗಿದು ಹೋಗಿರುವ ಕಾರಣ ಅದರಿಂದ ತಪ್ಪಿಸಿಕೊಳ್ಳಲು ಈ ದಾವೆಯನ್ನು ಸುಳ್ಳು ಸಂಗತಿಗಳ ಮೇಲೆ ಸಲ್ಲಿಸಲಾಗಿದೆ ಎಂದರೆ ಸುಳ್ಳು. ಈ ದಾವೆಯಲ್ಲಿ ಅಸಲು ದಾವಾ 126/90 ರ ತೀರ್ಪು ಮತ್ತು ಡಿಕ್ರಿ ಬದ್ಧ ಪಡಿಸುವುದಿಲ್ಲವೆಂದು ಕೇಳಿರುತ್ತೇನೆ.

ನಿಡಿ 81 ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿರುವ ಕಾರಣ ಈ ದಾವೆಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲವೆಂದರೆ ಶುದ್ಧ ಸುಳ್ಳು.

**(ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀಸವಾಲಿಗೆ ಸಮಯ ನೀಡಿದೆ)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ